
# ಬಿರುಗಾಳಿ




ಇಂಗ್ಲಿಷಿನ ಬ್ಲ್ಯಾಂಕ್ ವರ್ಸ್ ಛಂದಸ್ಸಿಗೆ ಸಂವಾದಿಯಾಗಿ ಕನ್ನಡದಲ್ಲಿ ಕುವೆಂಪು ಸೃಷ್ಟಿಸಿಕೊಂಡ ಸರಳರಗಳೆಯಲ್ಲಿ ರಚಿತವಾಗಿರುವ ಈ ನಾಟಕ ಕನ್ನಡದಲ್ಲಿನ ನಾಟಕ ಪ್ರಕಾರದಲ್ಲಿ ಹೊಸ ಶಖೆಯೊಂದನ್ನು ಆರಂಬಿಸಿದ್ದು 'ಬಿರುಗಾಳಿ'. ಕವಿ "ಷೇಕ್ಸ್ ಪಿಯರ್ ಮಹಾಕವಿಯ 'ಟೆಂಪೆಸ್ಟ್' ನಾಟಕದ ರೂಪಾಂತರ" ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ನಾಟಕದ ಹೊಸ ರೂಪವನ್ನುಕುರಿತು, ಮುನ್ನುಡಿ ಬರೆದಿರುವ ಅವರ ಗುರುಗಳಾದ ಶ್ರೀ ಟಿ.ಎಸ್. ವೆಂಕಣ್ಣಯ್ಯನವರು 'ಮೂಲ ಗ್ರಂಥವನ್ನು ಓದಿ, ಅದನ್ನು ಓದಿದ್ದರಿಂದ ತಮ್ಮ ಮನಸ್ಸಿನಲ್ಲಿ ಉಂಟಾದ ಮುಖ್ಯ ಮುಖ್ಯವಾದ ಚಿತ್ರಗಳನ್ನೂ ಭಾವಗಳನ್ನೂ ಆಧಾರವಾಗಿಟ್ಟುಕೊಂಡು ಒಂದು ಹೊಸ ನಾಟಕವನ್ನು ನಿರ್ಮಿಸಿರುತ್ತಾರೆ. ಇದನ್ನು ಮೂಲನಾಟಕದ ಭಾಷಾಂತರ ಅಥವಾ ಅನುವಾದ ಎಂದು ಹೇಳಲಾಗದು; ಆ ನಾಟಕವನ್ನು ಈ ನಾಟಕ ರಚನೆಗೆ ಪ್ರೇರಕವೆಂದು ಹೇಳಬಹುದು. ಅದರಲ್ಲಿರುವ ಅನೇಕ ಭಾವಗಳು ರೂಪಾಂತರವನ್ನು ಹೊಂದಿ ಇದರಲ್ಲಿ ಸೇರಿರುವುದು ಸ್ವಾಭಾವಿಕ" ಎಂದು ಗತುರುತಿಸಿದ್ದಾರೆ. "'ಬಿರುಗಾಳಿ'ಯಲ್ಲಿ ಸಾಮ್ರಾಜ್ಯಶಾಹಿಯ ರಾಷ್ಟ್ರೀಯ ಮನೋಭಾವನೆಗಳನ್ನು ಮಾತ್ರ ನಾವು ಗುರುತಿಸಿದರೆ ಅದು ವಿಶ್ವಕೃತಿಯ ಮಟ್ಟಕ್ಕೆ ಏರುವುದಿಲ್ಲ. ಸರ್ವಕಾಲ ಸರ್ವದೇಶ ಮಾನ್ಯವಾಗುವ ವಿಶ್ವತತ್ತ್ವಗಳ ಪ್ರತಿಮೆಗಳನ್ನು ಗುರುತಿಸುವುದರಿಂದ ನಾಟಕಕೃತಿಗೆ ವಿಶ್ವತ್ವ ಮತ್ತು ಶಾಶ್ವತತ್ವ ಒದಗುವಂತಾಗುತ್ತದೆ." ಎಂಬುದು ಕವಿಯ ಆಶಯ. 9 ದೃಶ್ಯಗಳನ್ನುಳ್ಳ ಈ ನಾಟಕದ ರಚನೆಯ ಕಾಲ 4.8.1929. ಅದೇ ವರ್ಷ ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳಿದ ಪ್ರದರ್ಶನಗೊಂಡು, 1930ರಲ್ಲಿ 'ಯಮನ ಸೋಲು' ನಾಟಕದೊಂದಿಗೆ ಪ್ರಕಟವಾಯಿತು.

1930 : ಮೊದಲ ಮುದ್ರಣ ('ಯಮನ ಸೋಲು' ನಾಟಕದೊಂದಿಗೆ)

1946 : ಕಾವ್ಯಾಲಯ ಮೈಸೂರು ಇವರಿಂದ ಬಿಡಿಯಾಗಿ

1950 : ''

1956 : ಉದಯರವಿಯಿಂದ ಪ್ರಕಟಣೆ. 1969, 1982, 1987, 1990, 1994, 1998, 2004, 2012ರಲ್ಲಿ ಮರುಮುದ್ರಣ

2004 : ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ 'ಕುವೆಂಪು ಸಮಗ್ರ ನಾಟಕಗಳು' ಸಂಪುಟದಲ್ಲಿ

2013 : ಕುವೆಂಪು ಟ್ರಸ್ಟ್ ಕುಪ್ಪಳಿ 'ಕುವೆಂಪು ಸಮಗ್ರ ಸಾಹಿತ್ಯ'ದ ಭಾಗವಾಗಿ

**ನಾಟಕದ ಪಾತ್ರಗಳು**

ರಣನಾಯಕ : ನಗರಸಂಸ್ಥಾನದ ಅರಸು

ಶಿವನಾಯಕ : ಅವನ ಮಗ

ರಂಗನಾಯಕ : ಅವನ ತಮ್ಮ

ಭೈರವನಾಯಕ : ಕೆಳದಿಯ ರಾಜ್ಯದ ನಾಯಕ

ರುದ್ರನಾಯಕ : ಅವನ ತಮ್ಮ

ಜಯದೇವ : ವೃದ್ಧ ಮಂತ್ರಿ

ಕಿನ್ನರ : ಭೈರವನಾಯಕನ ಅತಿಮಾನುಷ ಕಿಂಕರ

ಶನಿಯ : ಭೈರವನಾಯಕನ ಅರ್ಧಮಾನುಷ ಸೇವಕ

ಬೀಮಣ : ಬಾಣಸಿಗ

ತ್ರಿಶಂಕು : ಅವನ ಸಂಗಾತಿ

ಗೌರಾಂಬೆ : ಭೈರನಾಯಕನ ಪುತ್ರಿ

ಬನದೇವಿ, ಜಲದೇವಿ ಮೊದಲಾದವರು